# ಜಯ ಮಂಗಳಂ - ದುರುಳತಮ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
3. **Note:** Lyrics given without highlights are as per Ref. 1. The wordings given in yellow highlights are as per Ref. 2. There few minor differences here.

| | |
|---|---|
| ರಾಗ: ಭೈರವಿ ತಾಳ: ಅಟ | ರಾಗ: ಭೈರವಿ ತಾಳ: ಝಂಪೆ |
| | |
| ಜಯ ಮಂಗಳಂ ನಿತ್ಯ ಶುಭ ಮಂಗಳಂ \|\| ಪ \|\| | ಜಯ ಮಂಗಳಂ ನಿತ್ಯ ಶುಭ ಮಂಗಳಂ |
| | |
| ದುರುಳ ತಮ ವೇದವನು ಕದ್ದು ಪಾತಾಳದಲ್ಲಿ | ದುರುಳ ತಮ ವೇದವನು ಕದ್ದು ಪಾತಾಳದಲ್ಲಿ |
| ಇರಲವನ ಕೊಂದು ವೇದಾವಳಿಗಳ | ಇರಲವನ ಕೊಂದು ವೇದಾವಳಿಗಳ |
| ಸರಸಿಜೋದ್ಭವಗಿತ್ತು ಸುರ ಮುನಿಗಳನೆಲ್ಲ | ಸರಸಿಜೋದ್ಭವಗಿತ್ತು ಸುರ ಮುನಿಗಳನೆಲ್ಲ |
| ಪೊರೆವ ಶ್ರೀ ಮಚ್ಛಾವತಾರ ಹರಿಗೆ \|\| 1 \|\| | ಪೊರೆದ ಶ್ರೀ ಮತ್ಸ್ಯಾವತಾರಿ ಹರಿಗೆ |
| | |
| ಸುರರು ದೈತ್ಯರು ಕೂಡಿ ಸಿಂಧುವನು ಮಥಿಸುತಿರೆ | ಸುರರು ದೈತ್ಯರ ಕೂಡಿ ಸಿಂಧುವನು ಮಥಿಸುತಿರೆ |
| ಗಿರಿ ಮುಣುಗಿ ಪಾತಾಳಕಿಳಿದು ಪೋಗೆ | ಗಿರಿ ಮುಳಗಿ ಪಾತಾಳಕಿಳಿದು ಪೋಗೆ |
| ಭರದಿಂದಲಿ ಬಂದು ಗಿರಿಯ ಬೆನ್ನಿಲ್ಲೊತ್ತು | ಭರದಿಂದ ತಾ ಬಂದು ಗಿರಿಯ ಬೆನ್ನಳಗಾಂತು |
| ಸುರರ ರಕ್ಷಿಸಿದ ಶ್ರೀ ಕೂರ್ಮ ಹರಿಗೆ \|\| 2 \|\| | ಸುರರ ಸಂರಕ್ಷಿಸಿದ ಶ್ರೀ ಕೂರ್ಮ ಹರಿಗೆ |
| | |
| ಭೂಮಿಯನು ಹಿರಣ್ಯಾಕ್ಷನೆಂಬೊ ದೈತ್ಯನು ಸುತ್ತಿ | ಭೂಮಿಯನು ಹಿರಣ್ಯಾಕ್ಷಕನೆಂಬ ದೈತ್ಯನು ಸುತ್ತಿ |
| ಭೀಮ ವಿಕ್ರಮನು ಪಾತಾಳಕೊಯ್ಯೆ | ಭೀಮ ವಿಕ್ರಮನು ಪಾತಾಳಕೊಯ್ಯೆ |
| ತಾಮರಸ ಸಂಭವನು ಬಿನ್ನೈಸಲವನ ಕೊಂದು | ತಾಮರಸ ಸಂಭವನು ಬಿನ್ನೈಸಲವನಳಿದು |
| ಭೂಮಿಯನು ತಂದ ಶ್ರೀ ವರಾಹ ಹರಿಗೆ \|\| 3 \|\| | ಭೂಮಿಯನು ತಂದು ಶ್ರೀ ಭೂ ವರಾಹನಿಗೆ |
| | |
| ಪರಮ ಭಾಗವತ ಪ್ರಹ್ಲಾದನ ಹಿರಣ್ಯಕನು | ಪರಮ ಭಾಗವತ ಪ್ರಲ್ಹಾದನ ಹಿರಣ್ಯಕನು |
| ಪರಿ ಪರಿಯ ಬಾಧೆಯಿಂದಲಿ ಪೀಡಿಸೆ | ಪರಿ ಪರಿಯ ಬಾಧೆಯಿಂದಲಿ ಪೀಡಿಸೆ |
| ಕರುಣಾಳು ಕೋಪದಲಿ ದೈತ್ಯನುದರವ ಬಗೆದ | ಕರುಣಾಳು ಕೋಪದಲಿ ದೈತ್ಯನುದರವ ಬಗೆದ |
| ಶರಣ ರಕ್ಷಕನಾದ ನರಸಿಂಹಗೆ \|\| 4 \|\| | ಶರಣ ರಕ್ಷಕನಾದ ಶ್ರೀ ನರಸಿಂಹಗೆ |
| | |
| ಬಲಿ ಚಕ್ರವರ್ತಿ ಭೂಮಿಯ ಧಾರೆಯೆರೆಯಲು | ಬಲಿ ಚಕ್ರವರ್ತಿ ಭೂಮಿಯ ಧಾರೆಯರೆಯಲು |
| ಇಳೆಯನಳೆದವನ ಸುತಳಕ್ಕಿಳುಹಿದ | ಇಳೆಯನಳೆದವನ ಸುತಳಕೆ ಕಳುಹಿಸಿದ |

ಸಿಲುಕಿ ಭಕುತಿಗೆ ಮೆಚ್ಚಿ ಬಾಗಿಲ ಕಾಯಿದೆ
ಬಲವಂತ ವಾಮನಾವತಾರ ಹರಿಗೆ || 5 ||

ಕಾರ್ತವೀರ್ಯಾರ್ಜುನನ ಸಂಹರಿಸಿ ಮುದದಿಂದ
ಕೀರ್ತಿಯನು ಲೋಕದೊಳು ವಿಸ್ತರಿಸಿದೆ
ಪಾರ್ಥಿವಾಂತಕ ಬಾಹುಬಲ ಪರಿಪೂರ್ಣನೆ
ಆರ್ತ ಬಾಂಧವ ಭಾರ್ಗವ ರಾಮಗೆ || 6 ||

ದಶರಥನ ಮನೆಯಲುದ್ಭವಿಸಿ ರಾವಣಾಸುರನ
ದಶ ಶಿರವ ನೀಡ್ಯಾಡಿ ಅವನನುಜಗೆ
ವಸುಧಾಧಿಪತ್ಯವನು ಲಂಕೆಯೊಳಗವಗಿತ್ತ
ಅಸಮ ವಿಕ್ರಮ ರಾಮಚಂದ್ರ ಹರಿಗೆ || 7 ||

ಯದುಕುಲದಲಿ ಬಂದು, ಕೊಂದು ಕಂಸನನಂದು
ಮುದದಿ ಪಾಂಡವರನು ಉದ್ಧರಿಸಿದೆ
ಒದಗಿ ಕೌರವ ಬಲವ ಸಂಹರಿಸಿ ಪದವಿತ್ತು
ಮುದದಿ ಮನ್ನಿಸಿದ ಶ್ರೀ ಕೃಷ್ಣ ಹರಿಗೆ || 8 ||

ತ್ರಿಪುರದ ಮರಾರಿಯರ ಸತಿಯರ ಪತಿವ್ರತವ-
ನಪಹರಿಸಿ ದಿವ್ಯ ಮೋಹನ ರೂಪದಿ
ತ್ರಿಪುರ ಹರಗಂಬಾಗಿ ಶಿವಗೆ ಕೀರ್ತಿಯನಿತ್ತ
ಅಪರಿಮಿತ ಬುದ್ಧಾವತಾರ ಹರಿಗೆ || 9 ||

ಕಲಿಯುಗದ ಕಡೆಯಲ್ಲಿ ಖಳ ನೃಪರನೆಲ್ಲರನು
ತುಳಿಸಿ ಕುದುರೆಯ ಖುರದ ಪುಟಗಳಿಂದ
ಸುಲಭದಿಂ ನಡೆಸುತ ಕೃತಯುಗದ ಧರ್ಮವನು
ಬಲ್ಲಂಥ ಕಲ್ಕ್ಯಾವತಾರ ಹರಿಗೆ || 10 ||

ಮಂಗಳ ಪದಂಗಳನು ಭಕುತಿಯಿಂದಲಿ ಮೋಹನತ-
ರಂಗನೇರೆಲ್ಲ ರಾಗದಿ ಪಾಡಲು
ಮಂಗಳಾತ್ಮಕ ಸಿರಿ ಪುರಂದರ ವಿಠಲಗೆ
ಅಂಗನೇರೆಲ್ಲ ಆರತಿಯೆತ್ತಿರೇ || 11 ||

ಸಿಲುಕಿ ಭಕುತಿಗೆ ಮೆಚ್ಚಿ ಬಾಗಿಲವ ಕಾಯ್ದ ಶ್ರೀ
ಬಲವಂತ ಹರಿ ವಾಮನಾವತಾರನಿಗೆ

ಕಾರ್ತವೀರ್ಯಾರ್ಜುನನ ಸಂಹರಿಸಿ ಮುದದಿಂದ
ಕೀರ್ತಿಯನು ಲೋಕದೊಳು ವಿಸ್ತರಿಸಿದೆ
ಪಾರ್ಥಿವಾಂತಕ ಬಾಹು ಬಲದಿ ಪರಿಪೂರ್ಣಗೆ
ಆರ್ತ ಬಾಂಧವಗೆ ಭಾರ್ಗವ ರಾಮಗೆ

ದಶರಥನ ಮನೆಯಲುದ್ಭವಿಸಿ ಆ ರಾವಣನ
ದಶ ಶಿರವ ನೀಡಾಡಿ ಅವನನುಜಗೆ
ವಸುಧಾಧಿಪತ್ಯವನು ಲಂಕೆಯೊಳಗವಗಿತ್ತ
ಅಸಮ ವಿಕ್ರಮ ರಾಮಚಂದ್ರ ಹರಿಗೆ

ಯದುಕುಲದಿ ತಾ ಬಂದು ಕೊಂದು ಕಂಸನನಂದು
ಮುದದಿಂದ ಪಾಂಡವರನುದ್ಧರಿಸಿದ
ಒದಗೆ ಕೌರವ ಬಲವ ಸಂಹರಿಸಿ ಪದವಿತ್ತು
ಮುದದಿ ಮನ್ನಿಸಿದ ಶ್ರೀ ಕೃಷ್ಣ ಹರಿಗೆ

ತ್ರಿಪುರದ ಮರಾರಿಗಳ ಸತಿಯರ ಪತಿವ್ರತವ
ಅಪಹರಿಸಿ ದಿವ್ಯ ಮೋಹನ ರೂಪದಿ
ತ್ರಿಪುರ ಹರಗಂಬಾಗಿ ಶಿವಗೆ ಕೀರ್ತಿಯನಿತ್ತ
ಅಪರಮಿತ ಬುದ್ಧಾವತಾರ ಹರಿಗೆ

ಕಲಿಯುಗದ ಕಡೆಯಲ್ಲಿ ಖಳ ನೃಪರನೆಲ್ಲರನು
ತುಳಿಸಿ ಕುದುರೆಯ ಖುರದ ಪುಟಗಳಿಂದ
ಸುಲಭದಿಂ ನಡೆಸುತೀ ಕೃತಯುಗದ ಧರ್ಮವನು
ಒಲಿದಂಥ ಕಲ್ಕಿಯವತಾರ ಹರಿಗೆ

ಮಂಗಳ ಪದಂಗಳನು ಭಕ್ತಿಯಲಿ ಮೋಹನತ-
ರಾಂಗನೆಯರೆಲ್ಲ ರಾಗದಿ ಪಾಡುತ
ಮಂಗಳಾತ್ಮಕಗೆ ಸಿರಿ ಪುರಂದರ ವಿಠಲಗೆ
ಅಂಗನೆಯರೆಲ್ಲ ಆರತಿಯೆತ್ತಿರೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದೊಂದು ದಶಾವತಾರದ ಲೀಲೆಗಳನ್ನು ಒಳಗೊಂಡ ಮಂಗಳದ ಪದ್ಯ.

**ತಾಮರಸಸಂಭವ** = ಬ್ರಹ್ಮ

**ಪಾರ್ಥಿವಾಂತಕ** = ಕ್ಷತ್ರಿಯರ ವೈರಿ, ಪರಶುರಾಮ

**ಅಂಬು** = ಬಾಣ

**ತ್ರಿಪುರ** = ಆಕಾಶದಲ್ಲಿ ಅಸುರರು ಕಟ್ಟಿದ ಮೂರು ಪಟ್ಟಣ.

**ತ್ರಿಪುರಗಳನ್ನು ಸುಟ್ಟವ** – ಶಿವ

**Classification:** Keerthane
**Ankita:** siri purandara vittala
**Location:** NA
**Category:** mangala song, dashavatara, arati song
**Sub-Category:** dashavatara, mangala, prahallada, asura, veda, sura, muni, parvata, bhumi, bhima, brahma, bhagavata, karuna, sittu, Krishna, loka, ravana, lanka, rama, kamsa, bagilu, shiva, kudure, dharma, arati,
**Pravachana:** NA
**Explanation:** NA